**ಒಂದನೇ ಹೆಚ್ಚುವರಿ ಕಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ.**
**ಸಿಸಿ ನಂಃ 30/2022**

| ಪಿರ್ಯಾದುದಾರ | V/s | ಆರೋಪಿ |
|---|---|---|
| ಹೇಮನಗೌಡ ತೋಟದ,<br>ತಂದೆ ರುದ್ರಗೌಡ ತೋಟದ,<br>ವಯಸುಃ 54 ವರ್ಷ,<br>ವಾಸಃ ವಾಸನ ಗ್ರಾಮ,<br>ಹರಿಹರ ತಾಲ್ಲೂಕು, ಜಿಲ್ಲಾಃ ದಾವಣಗೆರೆ | | ಜಿ.ಚಂದ್ರಪ್ಪ<br>ತಂದೆ ಹನುಮಂತಪ್ಪ ಗುಂಡೇರಮನೆ,<br>ವಯಸ್ಸುಃ 70 ವರ್ಷ,<br>ವ್ಯವಸಾಯಗಾರರು ಹಾಗೂ ನಿವೃತ್ತ ಶಿಕ್ಷಕರು,<br>ವಾಸಃ ಸನ್ಯಾಸಿಕೋಡಮಗ್ಗಿ ಗ್ರಾಮ,<br>ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. |

**ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರ ಪ್ರಕಾರ ಆರೋಪಿಯ ಹೇಳಿಕೆ**

1. ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿದಂತಹ ಪಿರ್ಯಾದುದಾರರ ಸಾಕ್ಷಿ ವಿಚಾರಣೆಯನ್ನು ಕೇಳಿರುತ್ತೀರಾ?

ಉಃ ಕೇಳಿರುತ್ತೇನೆ.

2. ಪಿರ್ಯಾದುದಾರರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ನೀವು ಕುಟುಂಬದ ಅಡಚಣೆಗಾಗಿ ಹಣದ ಅವಶ್ಯಕತೆ ಇದ್ದುದರಿಂದ ರೂ.5,00,000/- ಹಣವನ್ನು ದಿನಾಂಕಃ 27.08.2021 ರಂದು ಕೈಗಡ ಸಾಲವಾಗಿ ಪಡೆದಿರುತ್ತೀರಿ. ಹಣಪಡೆದ ನಂತರ ಸದರಿ ಸಾಲವನ್ನು 1 ತಿಂಗಳ ಒಳಗಾಗಿ ವಾಪಸ್ಸು ಮಾಡುವದಾಗಿ ತಿಳಿಸಿದ್ದು, ನಂತರ ಸದರಿ ಹಣದ ಭದ್ರತೆಗಾಗಿ ನಿಮ್ಮ ಬಾಬ್ತು ಚೆಕ್ ನಂ. 406858 ದಿನಾಂಕಃ 13-10-2021 ರೂಃ 5,00,000/- ಎಂದು ನಮೂದಿಸಿ ಪಿರ್ಯಾದಿದಾರರಿಗೆ ಕೊಟ್ಟಿರುತ್ತೀರಿ ಅಂತ ಸಾಕ್ಷಿ ನುಡಿದಿರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತಿರಿ?

ಉಃ ಸುಳ್ಳು

3. ಪಿರ್ಯಾದುದಾರರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮುಂದುವರಿದು ಸದರಿ ಚೆಕ್ ನ್ನು ಬ್ಯಾಂಕ್ ಆಫ್ ಬರೋಡಾ, ಹರಿಹರ ಶಾಖೆಗೆ ಹಾಜರುಪಡಿಸಿದಾಗ ಅದು ಮಾನ್ಯಗೊಂಡಿದ್ದು "Payment stopped by drawer" ಅಂತ ಹೇಳಿ ವಾಪಸ್ಸು ಬಂದಿರುತ್ತದೆ ಎಂದು ನಿಮ್ಮ ವಿರುದ್ಧ ಸಾಕ್ಷಿ ನುಡಿದಿರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ?

ಉಃ ಸುಳ್ಳು

4. ಪಿರ್ಯಾದುದಾರರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮುಂದುವರಿದು ನಿನಗೆ ದಿನಾಂಕ 08.12.2021 ರಂದು ಲೀಗಲ್ ನೋಟಿಸನ್ನು ನೀಡಿದ್ದು ಆ ನೋಟಿಸ್ ನಿಮಗೆ ಜಾರಿಯಾದರೂ ಕೊಟ್ಟಂತಹ ನೋಟಿಸಿಗೆ ಯಾವುದೇ ಪ್ರತ್ಯುತ್ತರವನ್ನು ಕೊಟ್ಟಿರುವುದಿಲ್ಲ ಮತ್ತು ಚೆಕ್ಕಿನ ಹಣವನ್ನು ಕೊಟ್ಟಿರುವುದಿಲ್ಲ ಅಂತ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ, ಅದಕ್ಕೆ ನೀವೇನು ಹೇಳುತ್ತೀರಿ?

ಉಃ ಸುಳ್ಳು

5. ನಿಮ್ಮ ಪರವಾಗಿ ಏನನ್ನಾದರೂ ಹೇಳುವುದು ಇರುತ್ತದೆಯೇ?

ಉಃ ಇದೆ. ಲಿಖಿತ ಹೇಳಿಕೆ ನೀಡಿರುತ್ತಾರೆ

6. ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ?

ಉಃ ಇಲ್ಲ

(ಆರೋಪಿತನಿಗೆ ಮುಕ್ತ ನ್ಯಾಯಾಲಯದಲ್ಲಿ ಆತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಯಿತು, ನೀಡಿದಂತಹ ಉತ್ತರವನ್ನು ಬರೆದುಕೊಳ್ಳಲಾಯಿತು)

ಸಹಿ/-

ದಿನಾಂಕಃ 05.12.2024
ಸ್ಥಳಃ ಹರಿಹರ

1 ನೇ ಹೆಚ್ಚುವರಿ ಕಿರಿಯ ಸಿವಿಲ್ ನ್ಯಾಯಾಲಯ
ಮತ್ತು ಜೆ ಎಂ ಎಫ್ ಸಿ, ಹರಿಹರ.